2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

SC. No.43-2018

ದೋ.ಸಾ. 14
ಫ್ರಾ.ಸಾ. 11
ಪ್ರ.ವ.ಬೊ.ದಿನಾಂಕ. 08-07-2026

| | | |
|---|---|---|
| ಹೆಸರು | - | ಚಂದ್ರಶೇಖರ್ |
| ತಂದೆ ಹೆಸರು | - | ಹೆಚ್ ಬಿ ಚನ್ನಬಸಪ್ಪ |
| ವಯಸ್ಸು | - | 59 ವರ್ಷ |
| ಉದ್ಯೋಗ | - | ವ್ಯವಸಾಯ |
| ವಾಸ ಸ್ಥಳ | - | ಗಾಂಧಿನಗರ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ನನಗೆ ಚಾ.ಸಾ.1, 11, 16, 23 ರವರ ಪರಿಚಯ ಇದೆ. ನನಗೆ ಆರೋಪಿತರ ಪರಿಚಯ ಇದೆ.

2. ಆರೋಪಿ 1 ಇವರ ಮದುವೆ 8-10 ವರ್ಷದ ಹಿಂದೆ ಮದುವೆಯಾಗಿರುತ್ತದೆ. ಅದು ದಾವಣಗೆರೆಯಲ್ಲಿ ಆಗಿರುತ್ತದೆ. ಮದುವೆ ನಂತರ ಆರೋಪಿತರು ಹಾಗೂ ಕುಸುಮ ವಾಸವಾಗಿದ್ದರು. ಮತ್ತು ಆರೋಪಿ 1 ರ ಅಜ್ಜಿ ವಾಸವಾಗಿದ್ದರು. ಆರೋಪಿ 1 ಮತ್ತು ಕುಸುಮಳಿಗೆ ಒಂದು ಮಗು ಇದೆ.

3. ಆರೋಪಿತರು ಕುಸುಮಾಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಆರೋಪಿ 1 ರ ಮದುವೆ ಕಾಲಕ್ಕೆ ಕುಸುಮಾಳ ತಂದೆ ತಾಯಿ ಏನು ಕೊಟ್ಟಿದ್ದರು ಎಂದು ಗೊತ್ತಿಲ್ಲ. ಆರೋಪಿತರು ಕಿರುಕುಳ ಕೊಡುವ ವಿಚಾರಕ್ಕಾಗಿ ಕುಸುಮಾಳ ಮನೆಯವರು ಎಂದು ಪಂಚಾಯಿತಿ ಮಾಡಿರುವ ವಿಚಾರ ಗೊತ್ತಿಲ್ಲ.

4. ಕುಸುಮಾ ಮದುವೆಯಾಗಿ 5-6 ವರ್ಷಕ್ಕೆ ತೀರಿಕೊಂಡಿರುತ್ತಾಳೆ. ಈಗ ಅವಳು ತೀರಿಕೊಂಡು 8 ವರ್ಷಗಳಾಗಿದೆ. ಅವಳು ಅವರ ಮನೆಯಲ್ಲಿ ತೀರಿಕೊಂಡಳು. ಕುಸುಮಾ ಯಾವ ರೀತಿ ತೀರಿಕೊಂಡಿರುತ್ತಾಳೆ ಎಂಬುದು ಗೊತ್ತಿಲ್ಲ.

( ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

5. ಆರೋಪಿ 1 ಹಾಗೂ ಕುಸುಮಳ ಮದುವೆಯು ದಿಃ 02-06-2013 ರಂದು ಮೋತಿ ಚನ್ನಬಸಮ್ಮ ವೀರಪ್ಪ ಕಲ್ಯಾಣ ಮಂಟಪ ದಾವಣಗೆರೆಯಲ್ಲಿ ಆಗಿದೆ ಎಂಬುದು ನಿಜ. ಮದುವೆ ಪೂರ್ವದಲ್ಲಿ ಆರೋಪಿತರ ಬೇಡಿಕೆಯಂತೆ ವರದಕ್ಷಿಣೆ ಹಣ, ಬಂಗಾರ, ಬೈಕು ಕೊಟ್ಟು ಮದುವೆ ಮಾಡಿದ್ದರು ಎಂಬುದು ಗೊತ್ತಿಲ್ಲ. ನಾನು ಮದುವೆಗೆ ಹೋಗಿದ್ದೆ. ಮಗುವಾದ ನಂತರ ಆರೋಪಿತರು ಕುಸುಮಳಿಗೆ ಅಡುಗೆ ಮಾಡಲು ಬರುವುದಿಲ್ಲ, ವರದಕ್ಷಿಣೆ ಕಡಿಮೆ ತಂದಿದ್ದೀಯಾ ಅವಳನ್ನು ಮದುವೆ ಮಾಡಿಕೊಂಡು ತಪ್ಪು ಮಾಡಿದ್ದೇವೆ, ಬೇರೆಯವರು ಹೆಚ್ಚಿನ ವರದಕ್ಷಿಣೆ ಕೊಡುತ್ತಿದ್ದರು ಎಂದು ಕಿರುಕುಳ ಕೊಡುತ್ತಿದ್ದರು ಎಂಬುದು ಗೊತ್ತಿಲ್ಲ. ಸಿದ್ದಬಸಮ್ಮ ಆರೋಪಿತರಿಗೆ ತೊಂದರೆ

ಕೊಡಬೇಡಿ ಎಂದು ಹೇಳುತ್ತಿದ್ದಳು ಎಂಬುದು ಸುಳ್ಳು. ಆ ವಿಚಾರ ಸಿದ್ದಮ್ಮ ಸಹ ನನಗೆ ಹೇಳುತ್ತಿದ್ದಳು ಎಂಬುದು ಸುಳ್ಳು. ಅವಳ ಮಾತು ಯಾರು ಕೇಳುತ್ತಿರಲಿಲ್ಲ ಎಂಬುದು ಸುಳ್ಳು. ಆ ಕುರಿತಾಗಿ ಪಂಚಾಯಿತಿ ಆಗಿತ್ತು ಎಂಬುದು ಗೊತ್ತಿಲ್ಲ. ಕುಸುಮಾ ತೀರಿಕೊಂಡ ದಿನ ನಾನು ಮತ್ತು ಸಿದ್ದಬಸಮ್ಮ ಅವರ ಮನೆಯಲ್ಲಿ ಮಾತನಾಡುತ್ತ ಕುಳಿತಿದ್ದೆವು ಎಂಬುದು ಸುಳ್ಳು . ಆಗ ಆರೋಪಿ 1 ಒಳಗೆ ಹೋದ ಎನ್ನುವುದು ಸುಳ್ಳು. ನಾನು ಮನೆಗೆ ಹೋದೆ ಎನ್ನುವುದು ಸುಳ್ಳು.

6. ಸಿದ್ದಬಸಮ್ಮ ಆ ಸಮಯದಲ್ಲಿ ನನಗೆ ಕುಸುಮಾ ಮನೆಯಲ್ಲಿ ಇದ್ದಾಳೆ ಎಂದು ಹೇಳಿದ್ದಳು ಅನ್ನುವುದು ಸುಳ್ಳು. ಆ ಸಮಯದಲ್ಲಿ ನಾನು ಆರೋಪಿ 1 ರವರಿಗೆ ಮಾತನಾಡಿಸಿದಾಗ ಆತನು ಊಟ ತೆಗೆದುಕೊಂಡು ಹೋಗಲು ಬಂದಿದ್ದೇನೆ ಎಂದು ಹೇಳಿದನು. ಆರೋಪಿತರು ಕಿರುಕುಳ ಕೊಟ್ಟಿದ್ದರಿಂದ ಕುಸುಮಾ ತೀರಿಕೊಂಡಿದ್ದಾಳೆ ಎಂಬುದು ಗೊತ್ತಿಲ್ಲ. ಕುಸುಮಾ 1-00 ಗಂಟೆಗೆ ನನಗೆ ಅವಳು ತೀರಿಕೊಂಡಿದ್ದಾಳೆ ಎಂಬುದು ಗೊತ್ತಾಯಿತು ಎಂಬುದು ನಿಜ. ಆರೋಪಿತರು ನಮ್ಮ ಗ್ರಾಮದವರೇ ಆಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಬುದು ಸುಳ್ಳು.

8. ಈಗ ಓದಿ ಹೇಳುತ್ತಿರುವ ಹೇಳಿಕೆಯನ್ನು ಕೇಳಿದೆನು, ಆ ರೀತಿ ನಾನು ಪೋಲೀಸರಿಗೆ ಹೇಳಿರುವುದಿಲ್ಲ. ಸದರಿ ಹೇಳಿಕೆಯ ಭಾಗ ಹಾಗೂ ಮರುಹೇಳಿಕೆಯನ್ನು ನಿ.ಪಿ.50 ಮತ್ತು 51 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ 1 ರಿಂದ 3 ರವರ ಪರ ಶ್ರೀ ಆರ್ ಕೆ ವಕೀಲರಿಂದ.**

ಇರುವುದಿಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓ . ಹೇ. ಕೇ. ಸರಿಯಾಗಿದೆ.

(ಕೃಷ್ಣಮೂರ್ತಿ ಆರ್. ಪಡಸಲಗಿ)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .**

SC. No.43-2018

ದೋ.ಸಾ. 13
ಫ್ರಾ.ಸಾ. 10
ಪ್ರ.ವ.ಬೊ.ದಿನಾಂಕ. 08-07-2026

| | | |
|---|---|---|
| ಹೆಸರು | - | ಹೆಚ್ ಮಲ್ಲಿಕಾರ್ಜುನ |
| ತಂದೆ ಹೆಸರು | - | ಹನುಮಂತಪ್ಪ |
| ವಯಸ್ಸು | - | 48 ವರ್ಷ |
| ಉದ್ಯೋಗ | - | ನೀರಗಂಟಿ ಕೆಲಸ |
| ವಾಸ ಸ್ಥಳ | - | ಗಾಂಧಿನಗರ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ನನಗೆ ಚಾ.ಸಾ.12, 14, 15 ರವರ ಪರಿಚಯ ಇದೆ. ನನಗೆ ಚಾ.ಸಾ.1, 11, 16, 23 ರವರ ಪರಿಚಯ ಇಲ್ಲ. ನನಗೆ ಆರೋಪಿತರ ಪರಿಚಯ ಇದೆ.

2. ಆರೋಪಿ 1 ಇವರ ಮದುವೆ 15 ವರ್ಷದ ಹಿಂದೆ ಮದುವೆಯಾಗಿರುತ್ತದೆ. ಅದು ದಾವಣಗೆರೆಯಲ್ಲಿ ಆಗಿರುತ್ತದೆ. ಮದುವೆ ನಂತರ ಆರೋಪಿತರು ಹಾಗೂ ಕುಸುಮ ವಾಸವಾಗಿದ್ದರು. ಮತ್ತು ಆರೋಪಿ 1 ರ ಅಜ್ಜಿ ವಾಸವಾಗಿದ್ದರು. ಆರೋಪಿ 1 ಮತ್ತು ಕುಸುಮಳಿಗೆ ಒಂದು ಮಗು ಇದೆ.

3. ಆರೋಪಿತರು ಕುಸುಮಾಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಆರೋಪಿ 1 ರ ಮದುವೆ ಕಾಲಕ್ಕೆ ಕುಸುಮಾಳ ತಂದೆ ತಾಯಿ ಏನು ಕೊಟ್ಟಿದ್ದರು ಎಂದು ಗೊತ್ತಿಲ್ಲ. ಆರೋಪಿತರು ಕಿರುಕುಳ ಕೊಡುವ ವಿಚಾರಕ್ಕಾಗಿ ಕುಸುಮಾಳ ಮನೆಯವರು ಎಂದು ಪಂಚಾಯಿತಿ ಮಾಡಿರುವ ವಿಚಾರ ಗೊತ್ತಿಲ್ಲ.

4. ಕುಸುಮಾ ಮದುವೆಯಾಗಿ ನಾಲ್ಕೈದು ವರ್ಷಕ್ಕೆ ತೀರಿಕೊಂಡಿರುತ್ತಾಳೆ. ಈಗ ಅವಳು ತೀರಿಕೊಂಡು 8 ವರ್ಷಗಳಾಗಿದೆ. ಅವಳು ಅವರ ಮನೆಯಲ್ಲಿ ತೀರಿಕೊಂಡಳು. ಕುಸುಮಾ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ತೀರಿಕೊಂಡಿದ್ದಾಳೆ.

5. ನನಗೆ ಹಾಗೂ ಚಾ.ಸಾ.12 ಇವರಿಗೆ ಆರೋಪಿ 1 ಕರೆದು ಕುಸುಮಾ ಬಾಗಿಲು ಹಾಕಿಕೊಂಡಿದ್ದಾಳೆ, ತೆಗೆಯುತ್ತಿಲ್ಲ ಎಂದು ಕೂಗಿ ಕರೆದಿದ್ದು, ನಾವು ಅಲ್ಲಿ ಹೋಗಿ ಚಾ.ಸಾ.12 ಮತ್ತು ನಾನು ರೂಮಿನ ಬಾಗಿಲನ್ನು ಮುರಿದು ಒಳಗೆ ಹೋದಾಗ ಕುಸುಮಾಳ ದೇಹವು ವಾಲ್ ರೂಬಿನ ಹ್ಯಾಂಗರ್ ಗೆ ಸೀರೆ ಅಥವಾ ವೇಲ್ ರೀತಿಯ ಬಟ್ಟೆಯಲ್ಲಿ ನೇತಾಡುತ್ತಿತ್ತು. ನಾನು ಮತ್ತು ಚಾ.ಸಾ.12 ಮತ್ತು ಇತರರು ದೇಹವನ್ನು ಕೆಳಗೆ ಇಳಿಸಿದೆವು.

6. ಯಾವ ಕಾರಣಕ್ಕೆ ಕುಸುಮಾ ತೀರಿಕೊಂಡಿದ್ದಾಳೆ ಎಂಬುದು ಗೊತ್ತಿಲ್ಲ. ಮೂರು ದಿನ ಆದ ಮೇಲೆ ಪೋಲೀಸರು ನನ್ನ ವಿಚಾರಣೆ ಮಾಡಿರುತ್ತಾರೆ, ನನ್ನನ್ನು ಕರೆದಿರುತ್ತಾರೆ, ನಾನು ಹೋಗಿ ಜಾಗ ತೋರಿಸಿರುತ್ತೇನೆ. ನಿ.ಪಿ.4 ರಲ್ಲಿ ಆ ಜಾಗ ಕಾಣಿಸುತ್ತದೆ.

( ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

7. ಆರೋಪಿ 1 ಹಾಗೂ ಕುಸುಮಳ ಮದುವೆಯು ದಿಃ 02-06-2013 ರಂದು ಮೋತಿ ಚನ್ನಬಸಮ್ಮ ವೀರಪ್ಪ ಕಲ್ಯಾಣ ಮಂಟಪ ದಾವಣಗೆರೆಯಲ್ಲಿ ಆಗಿದೆ ಎಂಬುದು ಗೊತ್ತಿಲ್ಲ. ಮದುವೆ ಪೂರ್ವದಲ್ಲಿ ಆರೋಪಿತರ ಬೇಡಿಕೆಯಂತೆ ವರದಕ್ಷಿಣೆ ಹಣ, ಬಂಗಾರ, ಬೈಕು ಕೊಟ್ಟು ಮದುವೆ ಮಾಡಿದ್ದರು ಎಂಬುದು ಗೊತ್ತಿಲ್ಲ. ಮಗುವಾದ ನಂತರ ಆರೋಪಿತರು ಕುಸುಮಳಿಗೆ ಅಡುಗೆ ಮಾಡಲು ಬರುವುದಿಲ್ಲ, ವರದಕ್ಷಿಣೆ ಕಡಿಮೆ ತಂದಿದ್ದೀಯಾ ಅವಳನ್ನು ಮದುವೆ ಮಾಡಿಕೊಂಡು ತಪ್ಪು ಮಾಡಿದ್ದೇವೆ, ಬೇರೆಯವರು ಹೆಚ್ಚಿನ ವರದಕ್ಷಿಣೆ ಕೊಡುತ್ತಿದ್ದರು  ಎಂದು ಕಿರುಕುಳ ಕೊಡುತ್ತಿದ್ದರು ಎಂಬುದು ಗೊತ್ತಿಲ್ಲ. ಸಿದ್ದಬಸಮ್ಮ ಆರೋಪಿತರಿಗೆ ತೊಂದರೆ ಕೊಡಬೇಡಿ ಎಂದು ಹೇಳುತ್ತಿದ್ದಳು ಎಂಬುದು ಸುಳ್ಳು. ಆ ವಿಚಾರ ಸಿದ್ದಮ್ಮ ಸಹ ನನಗೆ ಹೇಳುತ್ತಿದ್ದಳು ಎಂಬುದು ಸುಳ್ಳು. ಅವಳ ಮಾತು ಯಾರು ಕೇಳುತ್ತಿರಲಿಲ್ಲ ಎಂಬುದು ಸುಳ್ಳು. ಆರೋಪಿತರು ಕುಸುಮಳಿಗೆ ವರದಕ್ಷಿಣೆ ಕುರಿತಾಗಿ ಹೊಡೆಬಡೆ ಮಾಡಿ ಹಿಂಸಿಸಿದ ಕಾರಣ ಅವಳು ತೀರಿಕೊಂಡಿದ್ದಾಳೆ ಎಂಬುದು ಗೊತ್ತಿಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿತರು ನಮ್ಮ ಗ್ರಾಮದವರಾಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂಬುದು ಸುಳ್ಳು.

8. ಈಗ ಓದಿ ಹೇಳುತ್ತಿರುವ ಹೇಳಿಕೆಯನ್ನು ಕೇಳಿದೆನು, ಆ ರೀತಿ ನಾನು ಪೋಲೀಸರಿಗೆ ಹೇಳಿರುವುದಿಲ್ಲ. ಸದರಿ ಹೇಳಿಕೆಯ ಭಾಗ ಹಾಗೂ ಮರುಹೇಳಿಕೆಯನ್ನು ನಿ.ಪಿ.48 ಮತ್ತು 49 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ 1 ರಿಂದ 3 ರ ಪರ ಶ್ರೀ ಆರ್ ಕೆ ವಕೀಲರಿಂದ.**

9. ನಾನು ಪೋಲೀಸರಿಗೆ ಹೇಳಿಕೆ ನೀಡಿಲ್ಲ ಎಂಬುದು ನಿಜ. ನಿನ್ನ ಮುಂದೆ ಮಹಜರ್ ಮಾಡಿ ಸಹಿ ಪಡೆದಿಲ್ಲ ಎಂದರೆ ಸಾಕ್ಷಿಯು ಮಹಜರ್ ಏನೋ ಗೊತ್ತಿಲ್ಲ, ಒಂದು ಸಹಿ ಪಡೆದಿದ್ದಾರೆ ಎನ್ನುತ್ತಾರೆ. ನಿ.ಪಿ.2 ರಲ್ಲಿ ನನ್ನ ಸಹಿ ಇಲ್ಲ ಎಂಬುದು ನಿಜ. ನಿ.ಪಿ.2 ರಲ್ಲಿ ಏನು ಬರೆದುಕೊಂಡರು ಎಂಬುದು ಗೊತ್ತಿಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓ . ಹೇ. ಕೇ. ಸರಿಯಾಗಿದೆ.

(ಕೃಷ್ಣಮೂರ್ತಿ ಆರ್. ಪಡಸಲಗಿ)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

SC. No.43-2018

ದೋ.ಸಾ. 12
ಫ್ರಾ.ಸಾ. 9
ಪ್ರ.ವ.ಬೊ.ದಿನಾಂಕ. 08-07-2026

| | | |
|---|---|---|
| ಹೆಸರು | - | ಜಯಕುಮಾರ್ @ ಜಯದೇವ |
| ತಂದೆ ಹೆಸರು | - | ಕೆಂಚಪ್ಪ |
| ವಯಸ್ಸು | - | 42 ವರ್ಷ |
| ಉದ್ಯೋಗ | - | ವ್ಯವಸಾಯ |
| ವಾಸ ಸ್ಥಳ | - | ಗಾಂಧಿನಗರ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ನನಗೆ ಚಾ.ಸಾ.13 ರಿಂದ 15 ರವರ ಪರಿಚಯ ಇದೆ. ಚಾ.ಸಾ.1, 11, 16, 23 ಇವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ.

2. ಆರೋಪಿತರ ಮನೆಯ 20 ಅಡಿ ದೂರದಲ್ಲಿ ನಮ್ಮ ಮನೆ ಇದೆ. ಆರೋಪಿ 1 ರ ಮದುವೆ ಮೆಳ್ಳೆಕಟ್ಟೆ ಗ್ರಾಮದಲ್ಲಿ ಆಗಿದೆ. ಮೃತಳು ಆತನ ಹೆಂಡತಿ ಇರುತ್ತಾಳೆ. ಅವರ ಮದುವೆ ಎಷ್ಟು ವರ್ಷದ ಹಿಂದೆ ಆಗಿತ್ತು ಎಂದು ಗೊತ್ತಿಲ್ಲ. ಸಾಕ್ಷಿಯು ಮತ್ತೆ ಅದು 13-14 ವರ್ಷದ ಹಿಂದೆ ದಾವಣಗೆರೆಯಲ್ಲಿ ಆಗಿತ್ತು ಎನ್ನುತ್ತಾರೆ. ಆರೋಪಿತರ ಮನೆಯಲ್ಲಿ ಆರೋಪಿತರು ಹಾಗೂ ಮೃತಳು ವಾಸವಾಗಿದ್ದರು. ಆರೋಪಿ 1 ಮತ್ತು ಮೃತಳಿಗೆ ಒಂದು ಗಂಡು ಮಗು ಆಗಿತ್ತು.

3. ಆರೋಪಿ 1 ಮತ್ತು ಮೃತಳು ಅನ್ಯೋನ್ಯವಾಗಿದ್ದರು. ನನಗೆ ಆರೋಪಿತರು ಮೃತಳಿಗೆ ಹಿಂಸೆ ಕೊಡುವ ವಿಚಾರವಾಗಿ ಪಂಚಾಯಿತಿ ಆಗಿರುವ ವಿಚಾರ ಗೊತ್ತಿಲ್ಲ. ಮೃತಳು 8-9 ವರ್ಷದ ಹಿಂದೆ ತೀರಿಕೊಂಡಿರುತ್ತಾಳೆ.

4. ನಾನು ಮತ್ತು ಮಲ್ಲಿಕಾರ್ಜುನ ನಾರದಮುನಿ ಅಂಗಡಿಯಿಂದ 8-9 ವರ್ಷದ ಹಿಂದೆ ಬರುತ್ತಿರುವವಾಗ ಆರೋಪಿ 1 ನಮಗೆ ಕೂಗಿದನು. ಹಾಗೂ ಅವನ ಹೆಂಡತಿ ರೂಂ ಬಾಗಿಲು ಹಾಕಿಕೊಂಡಿದ್ದಾಳೆ, ಎಷ್ಟು ಹೇಳಿದರು ತೆಗೆಯುತ್ತಿಲ್ಲ ಎಂದರು. ಆಗ ನಾನು ಮತ್ತು ಮಲ್ಲಿಕಾರ್ಜುನ ಬಾಗಿಲು ಬಾರಿಸಿ ತೆಗೆಯದೇ ಇದ್ದ ಕಾರಣ ಜೋರಾಗಿ ಒದ್ದಾಗ ಬಾಗಿಲು ಮುರಿದು ಒಳಗೆ ಕುಸುಮಳ ಮೃತ ಶರೀರವು ವಾಲ್ಡ್ ರೂಬಿನ ಹಿಂದೆ ಜೋತಾಡುತ್ತಿತ್ತು. ನಾನು, ಮಲ್ಲಿಕಾರ್ಜುನ ಮತ್ತು ಊರವರಿಬ್ಬರು ಆ ದೇಹವನ್ನು ಕೆಳಗೆ ಇಳಿಸಿದೆವು. ಆ ಮೇಲೆ ಸ್ವಲ್ಪ ಹೊತ್ತು ಕುಳಿತು ನಾವು ನಮ್ಮ ಮನೆಗೆ ಹೋದೆವು.

5. ನಂತರ ಏನಾಯಿತು ಎಂದು ನನಗೆ ಗೊತ್ತಿಲ್ಲ. ಮೂರ್ನಾಲ್ಕು ದಿನದ ನಂತರ ಪೋಲೀಸರು ಬಂದು ನನಗೆ ಬಾಡಿ ಇದ್ದ ಸ್ಥಳ ತೋರಿಸು ಎಂದರು, ನಾನು ಕೈ ಮಾಡಿ ತೋರಿಸಿದೆ, ನಂತರ ಪೋಲೀಸರು ಅದನ್ನು ಪೋಟೋ ತೆಗೆದುಕೊಂಡು ಸಹಿ ಮಾಡು ಎಂದರು, ನಾನು ಸಹಿ ಮಾಡಿರುತ್ತೇನೆ. ನಾನು ಸಹಿ ಮಾಡಿರುವ ದಾಖಲೆ ನಿ.ಪಿ.2 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿ.ಪಿ.2(ಸಿ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ

ನಿ.ಪಿ.4 ಆ ದಿನ ತೆಗೆದ ಫೋಟೋ ಆಗಿರುತ್ತದೆ. ಅದರಲ್ಲಿ ನಾನು ಮೂರನೇಯದವನು ಎಂದು ಗುರುತಿಸಲ್ಪಟ್ಟಿರುತ್ತೇನೆ.

6. ಕುಸುಮ ಯಾವ ಕಾರಣಕ್ಕೆ ಸತ್ತಳು ಎಂದು ಗೊತ್ತಿಲ್ಲ. ಪೋಲೀಸರು ನನ್ನನ್ನು ವಿಚಾರಿಸಿಲ್ಲ.

( ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

7. ಆರೋಪಿ 1 ಹಾಗೂ ಕುಸುಮಳ ಮದುವೆಯು ದಿಃ 02-06-2013 ರಂದು ಮೋತಿ ಚನ್ನಬಸಮ್ಮ ವೀರಪ್ಪ ಕಲ್ಯಾಣ ಮಂಟಪ ದಾವಣಗೆರೆಯಲ್ಲಿ ಆಗಿದೆ ಎಂಬುದು ಗೊತ್ತಿಲ್ಲ. ಮದುವೆ ಪೂರ್ವದಲ್ಲಿ ಆರೋಪಿತರ ಬೇಡಿಕೆಯಂತೆ ವರದಕ್ಷಿಣೆ ಹಣ, ಬಂಗಾರ, ಬೈಕು ಕೊಟ್ಟು ಮದುವೆ ಮಾಡಿದ್ದರು ಎಂಬುದು ಗೊತ್ತಿಲ್ಲ. ಮಗುವಾದ ನಂತರ ಆರೋಪಿತರು ಕುಸುಮಳಿಗೆ ಅಡುಗೆ ಮಾಡಲು ಬರುವುದಿಲ್ಲ, ವರದಕ್ಷಿಣೆ ಕಡಿಮೆ ತಂದಿದ್ದೀಯಾ ಅವಳನ್ನು ಮದುವೆ ಮಾಡಿಕೊಂಡು ತಪ್ಪು ಮಾಡಿದ್ದೇವೆ, ಬೇರೆಯವರು ಹೆಚ್ಚಿನ ವರದಕ್ಷಿಣೆ ಕೊಡುತ್ತಿದ್ದರು  ಎಂದು ಕಿರುಕುಳ ಕೊಡುತ್ತಿದ್ದರು ಎಂಬುದು ಗೊತ್ತಿಲ್ಲ. ಸಿದ್ದಬಸಮ್ಮ ಆರೋಪಿತರಿಗೆ ತೊಂದರೆ ಕೊಡಬೇಡಿ ಎಂದು ಹೇಳುತ್ತಿದ್ದಳು ಎಂಬುದು ಸುಳ್ಳು. ಆ ವಿಚಾರ ಸಿದ್ದಮ್ಮ ಸಹ ನನಗೆ ಹೇಳುತ್ತಿದ್ದಳು ಎಂಬುದು ಸುಳ್ಳು. ಅವಳ ಮಾತು ಯಾರು ಕೇಳುತ್ತಿರಲಿಲ್ಲ ಎಂಬುದು ಸುಳ್ಳು. ಆರೋಪಿತರು ಕುಸುಮಳಿಗೆ ವರದಕ್ಷಿಣೆ ಕುರಿತಾಗಿ ಹೊಡೆಬಡೆ ಮಾಡಿ ಹಿಂಸಿಸಿದ ಕಾರಣ ಅವಳು ತೀರಿಕೊಂಡಿದ್ದಾಳೆ ಎಂಬುದು ಗೊತ್ತಿಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿತರು ನಮ್ಮ ಗ್ರಾಮದವರಾಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂಬುದು ಸುಳ್ಳು.

8. ಈಗ ಓದಿ ಹೇಳುತ್ತಿರುವ ಹೇಳಿಕೆಯನ್ನು ಕೇಳಿದೆನು, ಆ ರೀತಿ ನಾನು ಪೋಲೀಸರಿಗೆ ಹೇಳಿರುವುದಿಲ್ಲ. ಸದರಿ ಹೇಳಿಕೆಯ ಭಾಗ ಹಾಗೂ ಮರುಹೇಳಿಕೆಯನ್ನು ನಿ.ಪಿ.46 ಮತ್ತು 47 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ 1 ರಿಂದ 3 ರ ಪರ ಶ್ರೀ ಆರ್ ಕೆ ವಕೀಲರಿಂದ.**

9. ನಾನು ಹನುಮಂತಪ್ಪ(ಸಿಡಬ್ಲ್ಯೂ-1) ನನ್ನು ಬಾಗಿಲು ಮುರಿದು ಹೋದ ದಿನ ಗಾಂಧಿನಗರ ಊರಿನಲ್ಲಿ ಆರೋಪಿತರ ಮನೆಯ ಕಾಂಪೌಂಡ್ ನಲ್ಲಿ ನೋಡಿದೆನು. ಆ ಸಮಯದಲ್ಲಿ ಆತನು ಮೃತ ಕುಸುಮಳೊಂದಿಗೆ ಮಾತನಾಡುತ್ತಿದ್ದನು. ನಾವು ಹೊಲಕ್ಕೆ ಹೋದೆವು. ಆ ದಿನ ನಾವು ಬಾಗಿಲು ಮುರಿದು ಹೋದಾಗ ಬಾಗಿಲ ಹಿಂದೆ ಮೇಲ್ಭಾಗದಲ್ಲಿ ವಾಲ್ಡ್ ರೂಬ್ ಇದ್ದು, ಅದರ ಬಾಗಿಲಿನ ಹ್ಯಾಂಡಲ್‌ಗೆ ನೇತಾಡುತ್ತಿದ್ದಳು. ಕುಸುಮ ಸೀರೆಯಿಂದನೋ ಅಥವಾ ವೇಲ್ ದಿಂದಲೋ ನೇತಾಡುತ್ತಿದ್ದಳು, ಅದನ್ನು ನಾನು ಸರಿಯಾಗಿ ನೋಡಿಲ್ಲ.

10. ನಿ.ಪಿ.4 ರಲ್ಲಿ ನಾನು ಬೆರಳು ಮಾಡಿ ತೋರಿಸುತ್ತಿರುವ ಜಾಗ ಕುಸುಮಳ ನೇತಾಡುತ್ತಿರುವ ಹೆಣವನ್ನು ಇಳಿಸಿಕೊಂಡು ಮಲಗಿಸಿದ ಜಾಗ ಎಂಬುದು ನಿಜ.

11. ಆ ದಿನ ಆಗಲಿ ಅಥವಾ ಅದರ ಮರುದಿನ ಆಗಲಿ ಪೋಲೀಸರು ನನ್ನನ್ನು ಕರೆಸಿಲ್ಲ ಹಾಗೂ ಹೇಳಿಕೆ ಪಡೆದಿಲ್ಲ. ನಿ.ಪಿ.2(ಸಿ) ಯನ್ನು ಬಾಡಿ ಇಳಿಸಿದ ಮೂರ್ನಾಲ್ಕು ದಿನದ ನಂತರ ಮಾಡಿರುತ್ತೇನೆ. ನಿ.ಪಿ.2 ರಲ್ಲಿ ಬರೆದ ವಿಚಾರ ನನಗೆ ಗೊತ್ತಿರುವುದಿಲ್ಲ, ಯಾಕೆಂದರೆ ನನಗೆ ಓದಲು ಬರುವುದಿಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓ . ಹೇ. ಕೇ. ಸರಿಯಾಗಿದೆ.

(ಕೃಷ್ಣಮೂರ್ತಿ ಆರ್. ಪಡಸಲಗಿ)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.